(ಈ ಹಂತದಲ್ಲಿ ಬಿ.ಜೆ.ಪಿ ಸದಸ್ಯರು ಸದನದ ಬಾವಿಯಲ್ಲಿ ಘೋಷಣೆಗಳನ್ನು ಕೂಗುತ್ತಾ ಧರಣಿಯಲ್ಲಿ ನಿರತರಾಗಿದ್ದರು)

7. ಶಾಸನ ರಚನೆ

ಅ. ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

(i) ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2014

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):– ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2014 ಅನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವನೆ ಮಂಡಿಸಲಾಯಿತು.

ಈಗ ಪ್ರಸಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

2014ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ಮಾನ್ಯ ಮುಖ್ಯಮಂತ್ರಿಯವರು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):– ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ–3)

(2) ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2014

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):– ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವನೆ ಮಂಡಿಸಲಾಯಿತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

2014ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ಮಾನ್ಯ ಸಚಿವರು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):– ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ–4)

ಆ. ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಪರ್ಯಾಲೋಚನಾ ಪ್ರಸ್ತಾವ

(i) ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2014

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):– ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2014 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):– ಮಾನ್ಯ ಅಧ್ಯಕ್ಷರೆ, ನಾವು ನಾಲ್ಕು ತಿಂಗಳುಗಳವರೆಗೆ ಲೇಖಾನುದಾನ ತೆಗೆದುಕೊಂಡಿದ್ದೆವು. ಇನ್ನು ಉಳಿದ 8 ತಿಂಗಳುಗಳಿಗೆ ಆ ಬಜೆಟ್ ಮೇಲೆ ಸಂಪೂರ್ಣವಾಗಿ ಚರ್ಚೆಗೆ ಅವಕಾಶವಿಲ್ಲದೇ ಇರುವುದರಿಂದ ಸಂಪೂರ್ಣವಾಗಿ ಅದಕ್ಕೆ ಒಪ್ಪಿಗೆ ಕೊಡಬೇಕೆಂದು ಸದನವನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.